# ಮಹಿಳಾ ಸಬಲೀಕರಣದಲ್ಲಿ ಕನ್ನಡ ನಿಯತಕಾಲಿಕೆಗಳ ಪಾತ್ರ

**ಸುಜೀಶ್ ಎಸ್.**

ಸಹಾಯಕ ಪ್ರಾಧ್ಯಾಪಕರು, ಗೋವಿಂದ ಪೈ ಸ್ಮಾರಕ ಸರ್ಕಾರಿ ಕಾಲೇಜು,
ಮಂಜೇಶ್ವರ, ಕಾಸರಗೋಡು, ಕೇರಳ.

## ABSTRACT:

ಭಾರತೀಯ ಸಮಾಜ ಪುರುಷ ಪ್ರಧಾನವಾದುದು. ಶತಶತಮಾನಗಳಿಂದಲೂ ಹೆಣ್ಣನ್ನು ಎರಡನೇಯ ದರ್ಜೆಯ ಪ್ರಜೆಯನ್ನಾಗಿ ನಡೆಸಿಕೊಂಡು ಬಂದಿರುವುದನ್ನು ಕಾಣಬಹುದಾಗಿದೆ. ಈ ಬಗೆಯ ಸಾಮಾಜಿಕ ವ್ಯವಸ್ಥೆಯಿಂದ ಶೋಷಣೆಗೆ ಗುರಿಯಾದ ಹೆಣ್ಣು ಆ ಶೋಷಣೆಯಿಂದ ಹೊರಬರಲು ನಿರಂತರವಾದ ಪ್ರಯತ್ನ ಮಾಡಿದ ಫಲವೆಂಬಂತೆ ಇಂದು ಆಕೆಯ ಸಾಮಾಜಿಕ ಸ್ಥಿತಿ–ಗತಿಯಲ್ಲಿ ಕೊಂಚ ಸುಧಾರಣೆಯನ್ನು ಕಾಣಲು ಸಾಧ್ಯವಾಗುತ್ತಿದೆ. ಈ ಬಗೆಯ ಸುಧಾರಣೆಯಲ್ಲಿ ಸಮೂಹ ಮಾಧ್ಯಮಗಳ ಪಾತ್ರವನ್ನು ಅಲ್ಲಗಳೆಯುವಂತಿಲ್ಲ.

ಸಮೂಹ ಮಾಧ್ಯಮಗಳು ಸುಂದರ ಸಮಾಜ ನಿರ್ಮಾಣದಲ್ಲಿ ಪ್ರಮುಖವಾದ ಪಾತ್ರವನ್ನು ವಹಿಸುತ್ತದೆ. ಪ್ರಸ್ತುತ ಸಮೂಹ ಮಾಧ್ಯಮಗಳು ಹಣ ಗಳಿಕೆಯ ಭರದಲ್ಲಿ ತನ್ನ ನೈತಿಕ ಮೌಲ್ಯವನ್ನು ಮರೆತಂತಿದೆ. ಆದಾಗಿಯೂ ಕೆಲವು ಸಮೂಹ ಮಾಧ್ಯಮಗಳು ತಮ್ಮ ಸಾಮಾಜಿಕ ಜವಾಬ್ದಾರಿಗೆ ಅನುಗುಣವಾಗಿ ಕಾರ್ಯನಿರ್ವಹಿಸುತ್ತಿರುವುದು ಸಹ ಪ್ರಶಂಸನೀಯ ಸಂಗತಿಯಾಗಿದೆ. ಸಮೂಹ ಮಾಧ್ಯಮಗಳಲ್ಲಿ ನಿಯತಕಾಲಿಕೆಯೂ ಸಹ ಒಂದಾಗಿದೆ. ಆಧುನೀಕರಣದ ಆವಿಷ್ಕಾರದಿಂದಾಗಿ ನಿಯತಕಾಲಿಕೆಗಳು ತನ್ನ ಮೌಲ್ಯವನ್ನು ಕಳೆದುಕೊಳ್ಳುತ್ತಿರುವ ಪ್ರಸ್ತುತ ದಿನಮಾನಗಳಲ್ಲಿಯೂ ಸಹ ಕೆಲವು ನಿಯತಕಾಲಿಕೆಗಳು ಸಾಮಾಜಿಕ ಜವಬ್ದಾರಿಯನ್ನು ಹೊತ್ತು ಕಾರ್ಯನಿರ್ವಹಿಸುತ್ತ ಬರುತ್ತಿವೆ.

ಈ ನಿಯತಕಾಲಿಕೆಗಳು ಸಮಾಜಮುಖಿಯಾದ ವಸ್ತುವನ್ನು ಆಯ್ಕೆ ಮಾಡಿಕೊಂಡು ಲೇಖನ, ಕಥೆ, ಕವನಗಳನ್ನು ಪ್ರಕಟಿಸುವ ಮೂಲಕ ಸಮಾಜವನ್ನು ತಿದ್ದುವ ಕೆಲಸವನ್ನು ನಿರಂತರವಾಗಿ ಮಾಡಿಕೊಂಡು ಬಂದಿವೆ. ಈ ನೆಲೆಯಲ್ಲಿ ಕನ್ನಡ ನಿಯತಕಾಲಿಕೆಗಳು ಮಹಿಳೆಯರ ಸಬಲೀಕರಣದಲ್ಲಿ ಬೀರಿರುವ ಪ್ರಭಾವವನ್ನು ಗುರುತಿಸುವ ಪ್ರಯತ್ನವನ್ನು ಈ ಲೇಖನದ ಮೂಲಕ ಮಾಡಲಾಗಿದೆ.

## KEYWORDS:

ಸಮೂಹ ಮಾಧ್ಯಮ, ನಿಯತಕಾಲಿಕೆ, ಶಿಕ್ಷಣ, ಆಧುನೀಕರಣ, ವಾಸ್ತವಾಂಶ, ಪುರುಷ ಪ್ರಧಾನ.

ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆ ನಾನಾ ರೀತಿಯ ಸಮಸ್ಯೆಗಳಿಗೆ, ಹಿಂಸೆಗೆ, ದೌರ್ಜನ್ಯಕ್ಕೆ ಒಳಗಾಗಿದ್ದಾಳೆ. ಮಹಿಳೆ ತನ್ನ ಸಮಸ್ಯೆಗಳಿಂದ ಹೊರ ಬಂದು ತನ್ನ ಸ್ಥಿತಿಯನ್ನು ಸುಧಾರಿಸಿಕೊಳ್ಳಲು ಹಾಗೂ ಬದಲಾಯಿಸಿಕೊಳ್ಳಲು ಬೇಕಾದ ವೇದಿಕೆಯನ್ನು ಕನ್ನಡ ನಿಯತಕಾಲಿಕೆಗಳು ಕಲ್ಪಿಸುತ್ತಿವೆ. ನಿಯತಕಾಲಿಕೆಗಳು ಮಹಿಳಾ ಶೋಷಣೆಯ ಸ್ವರೂಪದ ದರ್ಶನವನ್ನು ಮಾಡಿಸುತ್ತಾ, ಅನ್ವೇಷಿಸುತ್ತಾ ಮಹಿಳೆಯರಲ್ಲಿ ಹೋರಾಟದ ಮನೋಭಾವವನ್ನು ಜಾಗೃತಿಗೊಳಿಸುತ್ತಿವೆ. ಸಮಾಜದಲ್ಲಿ ಪರಂಪರಾಗತವಾಗಿ ಬಂದಿರುವ ಮಹಿಳಾ ವಿರೋಧಿ ಚಿಂತನೆಗಳನ್ನು ವಿವರವಾಗಿ ತಿಳಿಸುತ್ತಾ ಮಹಿಳೆಯರಲ್ಲಿ ಭಿನ್ನವಾಗಿ ಯೋಚಿಸುವ ಮನೋಭಾವವನ್ನು ಹುಟ್ಟು ಹಾಕಿ ಅವರು ಸ್ವಾವಲಂಬಿ ಬದುಕನ್ನು ರೂಪಿಸಿಕೊಳ್ಳುವಂತೆ ಮಾಡುತ್ತಿವೆ.

ಮಹಿಳಾ ಸಬಲೀಕರಣ ಪ್ರಕ್ರಿಯೆಯಲ್ಲಿ ಸಮೂಹ ಮಾಧ್ಯಮಗಳ ಪಾತ್ರ ಪ್ರಮುಖವಾದದ್ದು. ಮಹಿಳೆಯರನ್ನು ಕುರಿತಂತೆ ಸಮಾಜದ ದೃಷ್ಟಿಕೋನ, ನಂಬಿಕೆ, ಮನೋಭಾವ, ಪುರುಷ ಪ್ರಧಾನ ವ್ಯವಸ್ಥೆಯ ನಿಲುವುಗಳನ್ನು ಪ್ರಚುರ ಪಡಿಸುವಲ್ಲಿ ಮಾಧ್ಯಮಗಳ ಪಾತ್ರ ಮಹತ್ವವಾದದ್ದು. ಸಮೂಹ ಮಾಧ್ಯಮಗಳಲ್ಲಿ ಪತ್ರಿಕೋದ್ಯಮವು ಬಹಳ ಮುಖ್ಯವಾದದ್ದು. ಯಾವುದೇ ಸಮಾಜದ ಉನ್ನತಿಯಲ್ಲಿ ಪತ್ರಿಕೆಗಳ ಪಾತ್ರ ಅಪಾರವಾಗಿದೆ. ದೈನಂದಿನ ಚಟುವಟಿಕೆಗಳ ಕುರಿತು ಹಾಗೂ ಸಮಾಜದ ಆಗು–ಹೋಗುಗಳ ಕುರಿತಂತೆ ವಾಸ್ತವಾಂಶಗಳನ್ನು ಹೊರತಂದು ಅದನ್ನು ಜನ ಸಮುದಾಯಕ್ಕೆ ಬಿತ್ತರಿಸುವ ಕೆಲಸವನ್ನು ಪತ್ರಿಕೆಗಳು ಮಾಡುತ್ತಿವೆ.

ನಿಯತಕಾಲಿಕೆಗಳು ಓದುಗರಿಗೆ ಮನೋರಂಜನೆ ಮತ್ತು ಜ್ಞಾನಾರ್ಜನೆಯನ್ನು ಒದಗಿಸುತ್ತವೆ. ಇವು ವಿಚಾರಗಳ ಪ್ರಚೋದನೆಗಳಿಗೆ ಹೆಚ್ಚಿನ ಆಧ್ಯತೆಯನ್ನು ಕೊಡುತ್ತವೆ. ನಿಯತಕಾಲಿಕೆಗಳ ಮುಖ್ಯ ಆಕರ್ಷಣೆಯೆಂದರೆ ಅವುಗಳ ವಸ್ತು ಮತ್ತು ವೈವಿಧ್ಯತೆ. ದಿನ ಪತ್ರಿಕೆಗಳಿಗಿಂತ ನಿಯತಕಾಲಿಕೆಗಳು ವೈಶಿಷ್ಟ್ಯತೆಯಿಂದ ಕೂಡಿರುತ್ತವೆ. ದಿನಪತ್ರಿಕೆಗಳ ಆಯಸ್ಸು ಒಂದು ದಿನವಾದರೆ, ನಿಯತಕಾಲಿಕೆಗಳು ಅದು ಒಳಗೊಂಡಿರುವ ವಿಷಯದ ಸತ್ವ, ಸಾರ ಅವುಗಳ ಆಯಸ್ಸನ್ನು ನಿರ್ಧರಿಸುತ್ತದೆ. ನಿಯತಕಾಲಿಕೆಗಳಲ್ಲಿ ಕೆಲವು ವಾರ ಪತ್ರಿಕೆಗಳಾದರೆ, ಕೆಲವು ಪಾಕ್ಷಿಕಪತ್ರಿಕೆ, ಕೆಲವು ಮಾಸ ಪತ್ರಿಕೆ, ಕೆಲವು ದ್ವೈಮಾಸಿಕ, ತ್ರೈಮಾಸಿಕ, ಮತ್ತು ಆರು ತಿಂಗಳಿಗೊಮ್ಮೆ ಪ್ರಸಾರವಾಗುವ ಪತ್ರಿಕೆಗಳಿವೆ.

ಭಾರತೀಯ ಸಮಾಜದಲ್ಲಿ ಲಿಂಗತಾರತಮ್ಯ ಎಂಬುದು ಶತ–ಶತಮಾನದಿಂದ ಆಳವಾಗಿ ಬೇರುಬಿಟ್ಟಿದೆ. ಸಂಸ್ಕೃತಿ, ಸಂಪ್ರದಾಯ, ಆಚರಣೆ, ಕುಟುಂಬ, ವಿವಾಹ, ಆರೋಗ್ಯ, ಶಿಕ್ಷಣ, ಆರ್ಥಿಕತೆ, ರಾಜಕೀಯ ಹೀಗೆ ಹುಡುಕುತ್ತಾ ಹೋದರೆ ತಾರತಮ್ಯವಿಲ್ಲದ ಕ್ಷೇತ್ರವೇ ಇಲ್ಲವೆನ್ನಿಸುತ್ತದೆ. ವಿವಿಧ ಕ್ಷೇತ್ರಗಳಲ್ಲಿ ಹೆಣ್ಣುಮಕ್ಕಳು

ತಾರತಮ್ಯಕ್ಕೆ ಒಳಗಾಗಿದ್ದಾರೆ. ಈ ತಾರತಮ್ಯ ವ್ಯಕ್ತಿಗತವಾಗಿ, ಸಾಮಾಜಿಕವಾಗಿ ಅಭಿವೃದ್ಧಿಯ ಪ್ರಕ್ರಿಯೆಗೆ ಕಂಟಕವಾಗುತ್ತಿದೆ. ಇದರ ಬಗೆಗಿನ ಅರಿವು ಎಲ್ಲರಿಗೂ ಇರಬೇಕಾದುದ್ದೇ, ಆದರೆ ಅನೇಕ ಜನರಿಗೆ ಇದರ ಬಗ್ಗೆ ಅರಿವಿಲ್ಲ. ಹೆಣ್ಣು ಮಕ್ಕಳ ಬಗೆಗಿನ ಇಂತಹ ತಾರತಮ್ಯದ ಅರಿವನ್ನು ಜನರಿಗೆ ತಲುಪಿಸುವ, ಮಹಿಳಾಪರ ಚಿಂತನೆಗಳನ್ನು ಹುಟ್ಟಿಸುವ, ಸಮಾನತೆಯ ಸಮಾಜವನ್ನು ನಿರ್ಮಿಸುವ ಅಗತ್ಯವಿದೆ. ಈ ನಿಟ್ಟಿನಲ್ಲಿ ಕೆಲವು ನಿಯತಕಾಲಿಕೆಗಳು ಕೆಲಸ ಮಾಡುತ್ತಿರುವುದು ಪ್ರಶಂಸನೀಯವಾದ ಸಂಗತಿಯಾಗಿದೆ.

ಆಧುನಿಕ ತಂತ್ರಜ್ಞಾನಗಳ ಪ್ರಭಾವದಿಂದಾಗಿ ಪತ್ರಿಕೆಗಳನ್ನು ನಡೆಸುವುದೇ ಕಷ್ಟವಾಗಿರುವ ಈ ಸಂಧರ್ಭದಲ್ಲಿ ನಿಯತಕಾಲಿಕೆಗಳು ತಮ್ಮ ಆಸ್ತಿತ್ವವನ್ನು ಕಳೆದುಕೊಳ್ಳುತ್ತಿವೆ. ಈ ಎಲ್ಲಾ ಸಮಸ್ಯೆಗಳ ನಡುವೆಯೂ ಮಹಿಳಾಪರ ಕಾಳಜಿಯುಳ್ಳ ನಿಯತಕಾಲಿಕೆಗಳು ಕರ್ನಾಟಕದ ಮೂಲೆ ಮೂಲೆಯಲ್ಲಿ ಹೊರ ಬರುತ್ತಿವೆ. ಈ ಪತ್ರಿಕೆಗಳಲ್ಲಿ ಬಿತ್ತರವಾಗುವ ವಿಷಯಗಳು ಲಿಂಗ ಸೂಕ್ಷ್ಮತೆಗಳನ್ನು ಹೊಂದಿದಂತಹುಗಳಾಗಿವೆ. ಲಿಂಗ ಅಸಮಾನತೆಯತಂಹ ವಿಷಯಗಳನ್ನು ಎಳೆ–ಎಳೆಯಾಗಿ ಬಿಡಿಸುತ್ತಾ ಜನತೆಯ ಮುಂದಿಡುವ ಪ್ರಯತ್ನ ಮಾಡಿವೆ. ಅಲ್ಲದೆ ಪತ್ರಿಕಾ ಲೇಖನಗಳು ಜನತೆಯಲ್ಲಿ ಅರಿವನ್ನು ಮೂಡಿಸುವ, ಹೋರಾಟದ ಛಾಪನ್ನು ಮೂಡಿಸುವ ಪ್ರಯತ್ನ ಮಾಡಿವೆ.

ಮಹಿಳಾ ಸಬಲೀಕರಣವು ಸಾಧ್ಯವಾಗಬೇಕಾದರೆ ಸಮಾಜದ ವಿವಿಧ ಕ್ಷೇತ್ರಗಳಲ್ಲಿನ ತಾರತಮ್ಯ ಹೋಗಲಾಡಿಸಬೇಕು. ಈ ತಾರತಮ್ಯತೆಯನ್ನು ಅಳಿಸಿ ಹಾಕುವ ಸಾಧ್ಯತೆಗಳನ್ನು ಮಹಿಳಾವಾದಿ ಲೇಖನಗಳು ಅಭಿವ್ಯಕ್ತಿಸುತ್ತಿವೆ. ಇಂತಹ ಲೇಖನಗಳನ್ನು ಪ್ರಚುರ ಪಡಿಸುವ ಮೂಲಕ ನಿಯತಕಾಲಿಕೆಗಳು ಲಿಂಗ ಅಸಮಾನತೆಯ ಬಗ್ಗೆ ಜನರಲ್ಲಿ ಅರಿವು ಮೂಡಿಸುತ್ತಿವೆ.

ಕರ್ನಾಟಕದ ಕನ್ನಡ ಮಹಿಳಾವಾದಿ ನಿಯತಕಾಲಿಕೆಗಳಲ್ಲಿ ಪ್ರಮುಖವಾದವು ನಮ್ಮ ಮಾನಸ, ಅಚಲ, ಸ್ತ್ರೀ ಮುಕ್ತಿ, ಜಾಗೃತಿ, ಸಂವೇದಿ ಮುಂತಾದವು. ಈ ನಿಯತಕಾಲಿಕೆಗಳು ಕಾಲದಿಂದ ಕಾಲಕ್ಕೆ ಸಮಾಜದಲ್ಲಿ ಆದ ಪರಿವರ್ತನೆಗಳಿಗೆ ಅನುಗುಣವಾಗಿ ಮಹಿಳೆಯರಿಗೆ ಎದುರಾದ ಮತ್ತು ಅವರು ಎದುರಿಸುತ್ತಿರುವ ಸಮಸ್ಯೆಗಳು, ದೌರ್ಜನ್ಯಗಳನ್ನು ಖಂಡಿಸಿ ಅವುಗಳ ವಿರುದ್ಧ ಹೋರಾಟ ನಡೆಸಿವೆ. ಮಹಿಳೆಯರ ಮೇಲಿನ ಅತ್ಯಾಚಾರ, ಲೈಂಗಿಕ ಕಿರುಕುಳ, ಕೌಟುಂಬಿಕ ಹಿಂಸೆ, ಹೆಣ್ಣು ಶಿಶುಹತ್ಯೆ, ಹೆಣ್ಣು ಭ್ರೂಣ ಹತ್ಯೆ, ವರದಕ್ಷಿಣೆ ಕಿರುಕುಳ ಮುಂತಾದ ವಿಚಾರಗಳನ್ನು ಬರೆಹಗಳ ಮೂಲಕ ಅನಾವರಣಗೊಳಿ ಇಂತಹ ಗಂಭೀರವಾದ ವಿಷಯಗಳನ್ನು ಚರ್ಚಿಸಿ, ಸಮಾಜದ ಜನರಲ್ಲಿ ಜಾಗೃತಿಯನ್ನು ಮೂಡಿಸುವ ಕೆಲಸವನ್ನು

ನಿಯತಕಾಲಿಕೆಗಳು ಮಾಡುತ್ತಿವೆ.

ಅಂತರಾಷ್ಟ್ರೀಯ ಮಹಿಳಾ ದಿನಚಾರಣೆಗಳ ವರದಿಗಳು, ಮಹಿಳಾ ಸಂಘಟನೆಗಳ ಕುರಿತಾದ ವಿಷಯಗಳು, ಮಹಿಳಾ ವಿಷಯ ಸಂಬಂಧಿ ನ್ಯಾಯಲಯಗಳ ತೀರ್ಪುಗಳ ವಿಮರ್ಶಾತ್ಮಕ ನೋಟ ಹೀಗೆ ಮೊದಲಾದ ವಿಷಯಗಳನ್ನು ಪ್ರಧಾನವಾಗಿ ಈ ನಿಯತಕಾಲಿಕೆಗಳು ಪ್ರಚುರಪಡಿಸುತ್ತದೆ. ಈ ವಿಷಯಗಳ ಕುರಿತಾಗಿ ತೀಕ್ಷ್ಣ ರೂಪದ ಬರೆಹಗಳನ್ನು ಪ್ರಕಟಿಸುತ್ತಿವೆ. ಈ ಮೂಲಕ ಮಹಿಳೆಯ ಸ್ಥಾನಮಾನ, ಸ್ಥಿತಿಗತಿಗಳು, ತಾರತಮ್ಯ, ಅಸಮಾನತೆ ಇವುಗಳ ಬಗ್ಗೆ ತಿಳುವಳಿಕೆ ಮೂಡುವಂತೆ ಮಾಡುತ್ತಿವೆ. ನ್ಯಾಯಯುತವಾದ, ಸಮಾನಯುತವಾದ ಸಮಾಜದ ಸ್ಥಾಪನೆಗೆ ಈ ನಿಯತಕಾಲಿಕೆಗಳು ಪ್ರಯತ್ನಿಸಿವೆ.

ಮಹಿಳೆಯರನ್ನು ಸಾಮಾಜಿಕ ಚೌಕಟ್ಟಿನಲ್ಲಿ ಬಂಧಿಸಿ, ಸಂಪ್ರದಾಯ ಬದ್ಧ ಸ್ತ್ರೀ ಪ್ರಧಾನ ಪಾತ್ರಗಳಿಗೆ ಹೆಚ್ಚು ಒತ್ತು ಕೊಟ್ಟು ಮಹಿಳೆಯರನ್ನು ಸಾಮಾಜಿಕ ಬದುಕಿನ ಪ್ರಧಾನ ನೆಲೆಯಿಂದ ದೂರ ಉಳಿಸುವ ಪ್ರಯತ್ನದಲ್ಲಿಯೇ ಮಗ್ನವಾಗಿರುವ ಪ್ರಸ್ತುತ ಸಾಮಾಜಿಕ ವ್ಯವಸ್ಥೆಯಲ್ಲಿ ನಿಯತಕಾಲಿಕೆಗಳು ಸಹೃದಯರಲ್ಲಿ, ಸಾಮಾಜಿಕ ಪ್ರಜ್ಞೆಯನ್ನುಂಟು ಮಾಡುವ ಲಿಂಗ ಅಸಮಾನತೆಯನ್ನು ಹೋಗಲಾಡಿಸುವ ಪ್ರಯತ್ನವನ್ನು ಮಾಡುತ್ತಿವೆ. ಮಹಿಳಾ ಸಂಬಂಧಿತ ವಿಚಾರಗಳ ಸಮಸ್ಯೆಗಳಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳು, ತೀರ್ಮಾನಗಳ ಸಕಾರಾತ್ಮಕ ಮತ್ತು ನಕಾರಾತ್ಮಕ ಧೋರಣೆಗಳು, ಅದರಲ್ಲಿರುವ ಲೋಪದೋಷಗಳು ಇತ್ಯಾದಿ ವಿಚಾರಗಳನ್ನು ನಿಯತಕಾಲಿಕೆಗಳು ಪ್ರಸ್ತಾಪಿಸುತ್ತಿವೆ.

ಮಹಿಳಾ ಸಬಲೀಕರಣ ಪರಿಕಲ್ಪನೆ, ಮಹಿಳಾ ಸಬಲೀಕರಣದ ವಿವಿಧ ನೆಲೆಗಳು ಹಾಗೂ ಆಯಾಮಗಳು, ತಂತ್ರಗಳು, ದಿಕ್ಕುದಿಸೆಗಳು, ಸರ್ಕಾರದ ಯೋಜನೆಗಳು, ಕಾರ್ಯಕ್ರಮಗಳು, ನೀತಿಗಳು, ಸರ್ಕಾರ ಕೈಗೊಂಡಿರುವ ಕ್ರಮಗಳ ವಿರುದ್ಧ ಹೋರಾಟ ಮುಂತಾದ ವಿಷಯಗಳ ಬಗ್ಗೆ ನಿಯತಕಾಲಿಕೆಗಳು ಮಾಹಿತಿಯನ್ನು ಒದಗಿಸಿವೆ ಹಾಗೂ ಅವುಗಳ ಕುರಿತು ಗಂಭೀರವಾಗಿ ಚರ್ಚಿಸಿವೆ. ಮಹಿಳಾವಾದಿ ಪತ್ರಿಕೆಗಳು, ಮಹಿಳಾ ಸಬಲೀಕರಣಕ್ಕಾಗಿ ಅನೇಕ ಕಾರ್ಯಕ್ರಮ, ಶಿಬಿರ, ಕಾರ್ಯಗಾರ, ವಿಚಾರ ಮಂಥನಗಳನ್ನು ನಡೆಸುತ್ತಾ ಮಹಿಳೆಯರಿಗೆ ತಮ್ಮ ಸಮಸ್ಯೆಗಳ ಬಗ್ಗೆ ಹಾಗೂ ಅವುಗಳ ಪರಿಹಾರದ ಸಾಧ್ಯತೆಗಳ ಬಗ್ಗೆ ಅರಿವನ್ನು ಮೂಡಿಸಿವೆ. ಸಂಘಟನಾ ಮತ್ತು ಸಾಮೂಹಿಕ ಪ್ರಯತ್ನದ ಮೂಲಕ ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರ ಸಾಧ್ಯ ಎಂಬ ತಿಳುವಳಿಕೆಯನ್ನು ಮೂಡಿಸಿವೆ.

ಈ ಮೂಲಕ ಮಹಿಳಾ ಸಮಾನತೆಗೆ, ಅಭಿವೃದ್ಧಿಗೆ ಒಟ್ಟಾರೆ ಮಹಿಳಾ ಸಬಲೀಕರಣಕ್ಕೆ ಪೂರಕವಾದ ರೀತಿಯಲ್ಲಿ ನೇರವಾದ ನಿಲುವಿನೊಂದಿಗೆ ಪ್ರಚಾರ

ಕಾರ್ಯವನ್ನು ಮುಂದುವರಿಸಿಕೊಂಡು ಬರುತ್ತಿವೆÉ. ಪುರುಷಪ್ರಧಾನ ಸಮಾಜ ವ್ಯವಸ್ಥೆಯಲ್ಲಿನ ದೋಷಗಳನ್ನು ಎತ್ತಿಹಿಡಿಯುತ್ತ ಸಮಾನಯುತವಾದ ಸಮಾಜದ ನಿರ್ಮಾಣಕ್ಕೆ ಬೇಕಾದ ಹೊಸದೊಂದು ಸಂಸ್ಕೃತಿಗಾಗಿ ಈ ನಿಯತಕಾಲಿಕೆಗಳು ಹುಡುಕಾಟ ನಡೆಸಿವೆ.

**ಪರಾಮರ್ಶನ ಗ್ರಂಥಗಳು:**

1. ಸರೋಜಾ ಕೆ., (2004), ಮಹಿಳೆ ಮತ್ತು ಸಮೂಹ ಮಾಧ್ಯಮಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
2. ಕಲಾವತಿ ಬಿ.ಜಿ., (2010), ಜಾಹಿರಾತುಗಳಲ್ಲಿ ಮಹಿಳಾ ಪ್ರಾತಿನಿಧೀಕರಣ, ಪ್ರಗತಿಗ್ರಾಫಿಕ್ಸ್, ಬೆಂಗಳೂರು.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4. 0 International License.